ಪಿಡಬ್ಲೂ: 1

<u>ಈ ದಿನ ದಿನಾಂಕ 25-10-2021 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.</u>

<u>ಪಾಟೀ ಸವಾಲು ಶ್ರೀ ಬಿ ಎಸ್ ಎಂ ಪ್ರತಿವಾದಿ ಪರ ವಕೀಲರಿಂದ:</u>

ನಾನು ನೆಲಮಂಗಲದಲ್ಲಿ ವಾಸವಾಗಿರುತ್ತೇನೆ. ಪ್ರತಿವಾದಿಯು ಹಾಕಿರುವ ತಕರಾರನ್ನು ಓದಿ ತಿಳಿದುಕೊಂಡಿರುತ್ತೇನೆ. ದಾವಸ್ವತ್ತನ್ನು ನನ್ನ ತಾತನಾದ ಬಸಣ್ಣ ಬಿನ್ ಚಿಕ್ಕಬಸಯ್ಯರವರು ಖರೀದಿ ಮಾಡಿದ್ದರು, ಅವರಿಂದ ನನಗೆ ಬಂದಿರುತ್ತದೆ. ಯಾವ ವರ್ಷದಲ್ಲಿ ಖರೀದಿ ಮಾಡಿರುತ್ತಾರೆಂದು ನನಗೆ ನೆನಪಿರುವುದಿಲ್ಲ. ನನ್ನ ತಾತನ ಹೆಸರಿನಲ್ಲಿ ದಾವಸ್ವತ್ತಿಗೆ ಖಾತೆ ಆಗಿರುತ್ತದೆ. ಅವರ ಪವತಿ ನಂತರ ನನ್ನ ತಂದೆಯವರ ಹೆಸರಿಗೆ ಖಾತೆ ಬದಲಾವಣೆಯಾಗಿರುತ್ತದೆ. ನನ್ನ ತಾತನ ಹೆಸರಿನಲ್ಲಿರುವಂತಹ ಕ್ರಯಪತ್ರವನ್ನು ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ ಆದರೆ ನನ್ನ ತಾತ ಮತ್ತು ನನ್ನ ತಂದೆಯವರ ಹೆಸರಿನಲ್ಲಿದ್ದ ಖಾತೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ. ನನ್ನ ತಾತನವರ ಹೆಸರಿಗೆ ಬಂದ ಕ್ರಯಪತ್ರ, ನನ್ನ ತಾತ ಮತ್ತು ತಂದೆಯವರ ಹೆಸರಿಗೆ ಆದಂತಹ ಖಾತೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದಲ್ಲಿ ನಿಜಾಂಶ ತಿಳಿಯುತ್ತದೆಂದು ಸದರಿ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

ನನ್ನ ತಾತನವರಿಗೆ ದಾವಸ್ವತ್ತು ದೊಡ್ಡೇಗೌಡ ಮತ್ತು ಗಿರಿಗೌಡರವರಿಂದ ಕ್ರಯ ಆಗಿರುತ್ತದೆ. ನಾವು ಅಣ್ಣ-ತಮ್ಮಂದಿರು ಯಾವುದೇ ವಿಭಾಗ ಪತ್ರವನ್ನು ಮಾಡಿಕೊಂಡಿರುವುದಿಲ್ಲ ಸಾಕ್ಷಿ ಮುಂದುವರೆದು ನಾವೆಲ್ಲಾ ಪ್ರತ್ಯೇಕ ಪ್ರತ್ಯೇಕವಾಗಿ ವಾಸ ಮಾಡಲು ಪ್ರಾರಂಭಿಸಿದೆವು ಆಗ ದಾವಸ್ವತ್ತು ನನಗೆ ಬಂದಿರುತ್ತದೆ. ನನ್ನ ಅಣ್ಣ-ತಮ್ಮಂದಿರಿಗೆ ಎಷ್ಟು ಅಳತೆಯ ಜಾಗ ಹೋಗಿದೆ ಎಂದು ನನಗೆ ಹೇಳಲು ಬರುವುದಿಲ್ಲ ಅಳತೆ ಮಾಡಿಯೇ ನೋಡಬೇಕಾಗುತ್ತದೆ.

ಪ್ರತಿವಾದಿ ತಕರಾರನ್ನು ಸಲ್ಲಿಸಿದ ನಂತರ ಯಾರ್ಯಾರಿಗೆ ಎಷ್ಟೆಷ್ಟು ಆಸ್ತಿ ಹೋಗಿರುತ್ತದೆಂದು ನಾನು ಪರಿಶೀಲನೆ ಮಾಡಿರುವುದಿಲ್ಲ. ದಾವಸ್ವತ್ತು ನನ್ನ ತಾತನವರಿಗೆ ನನ್ನ ತಂದೆಗೆ ಹಾಗೂ ನನಗೆ ಬಂದ ಬಗ್ಗೆ ದಾಖಲಾತಿಗಳಿವೆ, ಯಾವೆಲ್ಲಾ ದಾಖಲಾತಿಗಳೆಂದರೆ ಸಾಕ್ಷಿ ಕ್ರಯಪತ್ರ, ಖಾತೆ ಎಕ್ಸ್‌ಟ್ರಾಕ್ಟ್ ಹಾಗೂ ಮನೆ

ಕಟ್ಟಲು ಪರವಾನಗಿ ಎಂದು ಉತ್ತರಿಸುತ್ತಾರೆ. ಅವೆಲ್ಲಾ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ. ದಾವಸ್ವತ್ತಿನಲ್ಲಿ ಖಾಲೀ ಜಾಗ ಎಷ್ಟಿದೆ ಹಾಗೂ ಮನೆ ಎಷ್ಟು ವಿಸ್ತೀರ್ಣದಲ್ಲಿದೆ ಎಂದು ತೋರಿಸಲು ದಾಖಲಾತಿಗಳಿವೆಯೇ ಎಂದರೆ ಸಾಕ್ಷಿ ಪ್ರತ್ಯೇಕವಾಗಿಲ್ಲ ಜಂಟಿಯಾಗಿದೆ ಎಂದು ನುಡಿಯುತ್ತಾರೆ.

ದಾವಸ್ವತ್ತು 34 ಇಂಟು 150 ಅಡಿ ಎಂದು ತೋರಿಸಲು ಯಾವುದಾದರೂ ದಾಖಲಾತಿಗಳನ್ನು ಹಾಜರು ಪಡಿಸಿದ್ದೀರಾ ಎಂದರೆ ಸಾಕ್ಷಿ ತಾನು ನ್ಯಾಯಾಲಯದಲ್ಲಿ ಹಾಜರು ಪಡಿಸಿದ ಎಲ್ಲಾ ದಾಖಲಾತಿಗಳನ್ನು ಪರಿಶೀಲಿಸಿ ನೋಡಿ ಇಲ್ಲ ಎಂದು ನುಡಿಯುತ್ತಾರೆ. ನಾನು 2001 ರಲ್ಲಿ ಮನೆಯನ್ನು ಕಟ್ಟಲು 16 ಇಂಟು 60 ವಿಸ್ತೀರ್ಣಕ್ಕೆ ಪರವಾನಗಿಯನ್ನು ಪಡೆದುಕೊಂಡಿರುತ್ತೇನೆ. ನಿಪಿ-15 ನ್ನು ಸಾಕ್ಷಿಗೆ ತೋರಿಸಲಾಗಿ ಸಾಕ್ಷಿ ಅದರಲಿಲ 16 ಇಂಟು 60 ಅಡಿ ವಿಸ್ತೀರ್ಣ ಎಂದು ನಮೂದು ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ. ದಾವಸ್ವತ್ತಿನ ಖಾತೆ ನಂ. 2/7 ಆಗಿದೆ. ನಿಪಿ-15 ರಲ್ಲಿ 7ನೇ ನಂಬರ್ ಎಂದು ನಮೂದಾಗಿದೆಯೇ ಹೊರತು 2/7 ಎಂದು ನಮೂದಾಗಿರುವುದಿಲ್ಲ ಎಂದರೆ ಸರಿ. ಪರವಾನಗಿ ನೀಡುವ ಮೊದಲು ಸ್ಥಳ ಮಹಜರನ್ನು ಮಾಡಿರುವುದಿಲ್ಲ.

ಅನುಮೋದನೆ ನಕ್ಷೆಯನ್ನು ನಾನು ನೀಡಿರುವುದಿಲ್ಲ, ಪರವಾನಗಿಯ ಶುಲ್ಕವನ್ನು ನಾನು ಪಾವತಿಸಿರುತ್ತೇನೆ ಆದರೆ ಅದರ ರಸೀದಿ ನನ್ನ ಬಳಿ ಇರುವುದಿಲ್ಲ, ನಿಪಿ-15 ಕ್ಕೂ ಮತ್ತು ದಾವಸ್ವತ್ತಿಗೂ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ವಿದ್ಯುಚ್ಛಕ್ತಿಯನ್ನು ಪಡೆಯಲು ನಿರಾಪೇಕ್ಷಣಾ ಪತ್ರವನ್ನು ನೀಡಲಾಗಿದ್ದು ಅದು ನನ್ನ ಬಳಿ ಇರುವುದಿಲ್ಲ, ಅದರಲ್ಲಿ ಚಕ್ಕುಬಂದಿ ನಮೂದಾಗಿರುತ್ತದೆಯೇ ಇಲ್ಲವೇ ಎಂದು ನನಗೆ ನೆನಪಿರುವುದಿಲ್ಲ, ದಾವಸ್ವತ್ತಿನ ಜಾಗದಲ್ಲಿ ಹಳೇ ಮನೆ ಇತ್ತೆಂದು ತೋರಿಸಲು ನನ್ನ ಬಳಿ ಯಾವುದೇ ದಾಖಾಲತಿ ಇರುವುದಿಲ್ಲ, ದಾವಸ್ವತ್ತು 34 ಇಂಟು 150 ಅಡಿ ಇಲ್ಲದಿದ್ದರೂ ಸುಳ್ಳು ದಾವೆಯನ್ನು ಸಲ್ಲಿಸಿದ್ದೀರಾ ಎಂದರೆ ಸರಿಯಲ್ಲ, ಸದರಿ ವಿಸ್ತೀರ್ಣವನ್ನು ತೋರಿಸಲು ನನ್ನ ಬಳಿ ಯಾವುದೇ ದಾಖಲೆ ಇರುವುದಿಲ್ಲ ಎಂದರೆ ಸರಿಯಲ್ಲ.

ಈ ದಾವೆಯನ್ನು ಸಲ್ಲಿಸುವ ಮೊದಲು ಈ ದಾವ ಸ್ವತ್ತಿನ ಮೇಲೆ ಬೇರೆ ಪ್ರಕರಣ ಇತ್ತು, ಈಗಲೂ ಅದು ಚಾಲ್ತಿಯಲ್ಲಿರುತ್ತದೆ. ಆ ದಾವೆಯಲ್ಲಿಯೂ ಸಹ ಈ ದಾವಸ್ವತ್ತಿನ ಅಳತೆ ಮತ್ತು ಚಕ್ಕುಬಂದಿಯನ್ನು ತೋರಿಸಲಾಗಿದೆ ಎಂದರೆ ಸರಿ. ಆ ದಾವೆಯ ದಾಖಲಾತಿಗಳನ್ನು ಈ ದಾವೆಯಲ್ಲಿ ನಾನು ಸಲ್ಲಿಸಿರುವುದಿಲ್ಲ, ಆ ದಾವೆಯ ದಾಖಲಾತಿಗಳನ್ನು ಈ ದಾವೆಯಲ್ಲಿ ಸಲ್ಲಿಸಿದಲ್ಲಿ ನಿಮಗೆ ಇಷ್ಟು ವಿಸ್ತೀರ್ಣದ ದಾವಸ್ವತ್ತು ಸ್ವಾಧೀನದಲ್ಲಿಲ್ಲ ಎಂಬ ವಿಚಾರ ತಿಳಿದು ಬರುತ್ತದೆಂದು ಹಾಜರು ಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

ಪ್ರತಿವಾದಿ ಮನೆ ದಾವಸ್ವತ್ತಿನ ಪೂರ್ವ ದಿಕ್ಕಿನಲ್ಲಿರುತ್ತದೆ. ಪ್ರತಿವಾದಿಯು ಅವರ ಹಳೇ ಮನೆಯನ್ನು ಕೆಡವಿ ಹೊಸ ಮನೆಯನ್ನು ಕಟ್ಟಲು ಪರವಾನಗಿ ಪಡೆದುಕೊಂಡಿರುತ್ತಾರೆಂದರೆ ಸರಿ. ಆ ಸಮಯದಲ್ಲಿ ನಾನು ಪಂಚಾಯ್ತಿ ತಕರಾರು ಮಾಡಿದ್ದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಮನೆಯನ್ನು ಕ್ಲೀನ್ ಮಾಡಲು ಬಂದಾಗ ತಕರಾರನ್ನು ಮಾಡಿರುತ್ತೇನೆಂದು ನುಡಿಯುತ್ತಾರೆ. ಕ್ಲೀನ್ ಮಾಡುವ ಮೊದಲು ಅಲ್ಲಿದ್ದ ಹಳೇ ಮನೆ ಕುಸಿದು ಬಿದ್ದಿತ್ತೆಂದರೆ ಸರಿಯಲ್ಲ. ಪ್ರತಿವಾದಿ ಸ್ವತ್ತಿನಲ್ಲಿ ಪ್ರತಿವಾದಿ ಬೆಳೆದಿರುವ ತೆಂಗಿನ ಮರಗಳಿವೆ ಎಂದರೆ ಸಾಕ್ಷಿಯು ಅದು ಅವರದ್ದಲ್ಲ ನಮ್ಮದು ಎಂದು ನುಡಿಯುತ್ತಾರೆ. ಪ್ರತಿವಾದಿ ಎಲ್ಲಾ ತೆಂಗಿನ ಮರಗಳನ್ನು ತೆಗೆದು ಜಾಗ ಕ್ಲೀನ್ ಮಾಡಿರುತ್ತಾರೆಂದರೆ ಸರಿಯಲ್ಲ.

ವೀರಣ್ಣ ಪ್ರತಿವಾದಿ ತಂದೆ ಎಂದರೆ ಸರಿ. ನಿಡಿ-1 ನ್ನು ತೋರಿಸಲಾಗಿ ಸಾಕ್ಷಿ ಅದರಲ್ಲಿರುವ ದಕ್ಷಿಣಕ್ಕೆ ಬರೆದಿರುವಂತಹ ಚಕ್ಕುಬಂದಿ ತಪ್ಪು ಇದೆ ಎಂದು ನುಡಿಯುತ್ತಾರೆ. ನಿಡಿ-1 ರ ಖಾತೆ ನಂಬರ್‌ಗಳು ಮತ್ತು ಉಳಿದ ವಿವರಗಳು ಸರಿ ಇವೆ ಮತ್ತು ಅದು ನನಗೆ ಸಂಬಂಧಿಸಿದ್ದಾಗಿದೆ. ನಿಡಿ-1 ನ್ನು ಹಾಜರು ಪಡಿಸಿ 4 ವರ್ಷಗಳಾಗಿವೆ ಎಂದರೆ ಸರಿ. ದಾವಸ್ವತ್ತು ಮತ್ತು ಪ್ರತಿವಾದಿಯ ಸ್ವತ್ತು ಒಟ್ಟಾಗಿ ರುದ್ರಯ್ಯ ಬಿನ್ ವೀರಣ್ಣರವರಿಗೆ ಕ್ರಯವಾಗಿರುತ್ತದೆಂದರೆ ಸರಿಯಲ್ಲ.

ಪಿಡಬ್ಲೂ: 1

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ವಕೀಲರು ಕಾಲಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.

(ನನ್ನ ಉಕ್ತಲೇಖನ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು
ದೊಡ್ಡಬಳ್ಳಾಪುರ

PW-1 present. Learned counsel for cross examined PW-1 partly.

Learned counsel for Defendant prays time. Granted for further cross of PW-1 by 17-11-21.

Prl. Civil Judge & JMFC

ಪಿಡಬ್ಲೂ: 1

Doddaballapura

Petitioner present and filed affidavit in lieu of chief examination and examined as PW-1 and marked as Ex.P1 to P5.
Sri. MGV prays time granted.
Call on for further chief of PW-1 by 28-07-2021.

Prl. Civil Judge & JMFC
Doddaballapura

ಪಿಡಬ್ಲೂ: 1